ನಾನು. 'ಉಹ್ಞೂಂ. ಅದನ್ನೂ ಕೂಡ ಒಂದೊಂದು ಸಲ ಕನಸಲ್ಲಿ ಕಂಡಿದ್ದೇನೆ,' ಅಂತ ದುಃಖದಲ್ಲಿ ಅಂದಳು. ನಾನು ಎದ್ದು ದೀಪದ ಕಡೆಗೆ ಹೋದೆ. ಅವಳು ನನಗೆ ಎಟುಕದೆ ಸ್ವಲ್ಪ ಅತ್ತಕಡೆಗೆ ಇದ್ದಳು. ನಾನು ಹೆಜ್ಜೆ ಹಾಕುತಲೇ ಇದ್ದೆ. ಸಿಗರೇಟು, ಮ್ಯಾಚಸ್ ಹಿಡಿದ ನನ್ನ ಕೈ ಏನು ಮಾಡಿದರೂ ದೀಪವನ್ನ ದಾಟುತಲೇ ಇರಲಿಲ್ಲ. ಸಿಗರೇಟಿನ ತುದಿ ಅವಳತ್ತ ಚಾಚಿದ್ದೆ. ಅದನ್ನು ತುಟಿಯಲ್ಲಿ ಕಚ್ಚಿಕೊಂಡಳು. ನಾನು ಕಡ್ಡಿ ಗೀರುವ ಮೊದಲೇ ಮುಂದೆ ಬಾಗಿ ದೀಪದಲ್ಲಿ ಸಿಗರೇಟು ಹಚ್ಚಿಕೊಂಡಳು. 'ನೀಲಿ ನಾಯೀ ಕಣ್ಣು ಅನ್ನೋ ಬರವಣಿಗೆ ಈ ಜಗತ್ತಿನ ಯಾವುದೋ ಊರಲ್ಲಿ, ಎಲ್ಲಾ ಗೋಡೆ ಮೇಲೆ ಇರಲೇಬೇಕು,' ಅಂದೆ ನಾನು. 'ನನಗೆ ನೆನಪಾದರೆ ನಾಳೇನೇ ನನಗೆ ಸಿಗತೀಯ.' ಅವಳು ಮತ್ತೆ ತಲೆ ಎತ್ತಿದಳು. ಉರಿಯುವ ಕೆಂಡ ಈಗ ಅವಳ ತುಟಿಗಳ ನಡುವೆ ಇತ್ತು. 'ನೀಲಿ ನಾಯೀ ಕಣ್ಣು,' ನಿಟ್ಟುಸಿರಿಟ್ಟಳು, ಸಿಗರೇಟು ಅವಳ ಗಲ್ಲದ ಮೇಲೆ ಜೋಲುತಿತ್ತು, ಒಂದು ಕಣ್ಣು ಅರ್ಧ ಮುಚ್ಚಿ ನೆನಪು ಮಾಡಿಕೊಂಡಳು. ಆಮೇಲೆ, ಎರಡು ಬೆರಳಲ್ಲಿ ಸಿಗರೇಟು ಹಿಡಿದು ಹೊಗೆ ಎಳಕೊಂಡಳು 'ಇನ್ನೇನೋ ಆಗತಾ ಇದೆ. ಮೈ ಬೆಚ್ಚಗಾಗತಾ ಇದೆ,' ಅಂದಾಗ ಅವಳ ದನಿ ಉಗುರುಬೆಚ್ಚಗಾಗಿ, ಅವಳು ಮಾತಾಡಲೇ ಇಲ್ಲವೇನೋ ಹಾಳೆಯ ಮೇಲೆ ಬರೆದಳೇನೋ ಅನ್ನೋ ಹಾಗಿತ್ತು, ಬರೆದಿದ್ದ ಕಾಗದ ಪೀಸು ಉರಿಯುತ್ತಿರುವ ದೀಪದ ಹತ್ತಿರ ತಂದು, 'ಮೈ ಬೆಚ್ಚಗಾಗತಾ ಇದೆ,' ಅನ್ನುವ ಬರಹವನ್ನು ನಾನು ಓದಿ ಮುಗಿಸುವುದರೊಳಗೆ ಹೆಬ್ಬೆಟ್ಟು-ತೋರುಬೆರಳ ಮಧ್ಯೆ ಇದ್ದ ಕಾಗದ ಬೆಂಕಿಗೆ ಹಿಡಿದು ತಿರುಗಿಸುತ್ತಾ ಇದ್ದಾಳೇನೋ ಅನ್ನೋ ಹಾಗಿತ್ತು. ಬೆಂಕಿ ಅದನ್ನು ಪೂರಾ ಸುಡುವ ಮೊದಲು ಮುದುರಿ ನೆಲದ ಮೇಲೆ ಬಿದ್ದು ಉರಿದು ಬೂದಿಯ ಪುಟ್ಟ ರಾಶಿಯಾಗಿತ್ತು. 'ಒಳ್ಳೇದಾಯಿತು. ಹೀಗೆ ನೀನು ದೀಪದ ಪಕ್ಕ ನಿಂತು ನಡುಗೋದನ್ನನೋಡಕ್ಕೆ ಒಂದೊಂದು ಸಲ ಭಯ ಆಗತ್ತೆ,' ಅಂದೆ

ಎಷ್ಟೋ ವರ್ಷದಿಂದ ಒಬ್ಬನ್ನೊಬ್ಬರು ನೋಡತ್ತಾ ಇದ್ದೆವು. ನಾವು ಒಟ್ಟಿಗೆ ಇರುವಾಗ ಒಂದೊಂದು ಸಲ ಹೊರಗೆ ಯಾರೋ ಚಮಚ ಬೀಳಿಸುತ್ತಿದ್ದರು, ನಮಗೆ ಎಚ್ಚರವಾಗುತ್ತಿತ್ತು. ನಮ್ಮ ಸ್ನೇಹ ಸುತ್ತಲ ವಸ್ತು, ಸಣ್ಣಪುಟ್ಟ ಘಟನೆಗಳಿಗೆ ಅಧೀನ ಅನ್ನುವುದು ಇಷ್ಟಿಷ್ಟೇ ನಮ್ಮ ಅರಿವಿಗೆ ಬಂದಿತ್ತು. ನಮ್ಮ ಭೇಟಿ ಯಾವಾಗಲೂ ಹೀಗೇ ಮುಗಿಯುತ್ತಿತ್ತು-ಬೆಳಗಿನ ಜಾವದಲ್ಲಿ ನೆಲಕ್ಕೆ ಬಿದ್ದ ಚಮಚದ ಸದ್ದಿನ ಜೊತೆಗೆ.

ಈಗ ನನ್ನ ನೋಡುತ್ತಾ ದೀಪದ ಪಕ್ಕದಲ್ಲಿದ್ದಳು. ನೆನಪಾಯಿತು- ಯಾವುದೋ ಕಾಲದ ಹಳೇ ಕನಸಿನಲ್ಲಿ ನಾನು ಕುರ್ಚಿಯನ್ನು ಇದೇ ಥರ ಹಿಂಗಾಲ ಮೇಲೆ ತಿರುಗಿಸಿ ಬೂದಿ ಕಣ್ಣಿನ ಅಪರಿಚಿತ ಹೆಂಗಸನ್ನು ನೋಡತ್ತಾ ಇದ್ದಾಗಲೂ ಅವಳು ನನ್ನನ್ನ ಹೀಗೇ ನೋಡಿದ್ದಳು. 'ನಿನ್ನ ಹೆಸರೇನು?' ಅಂತ ಆ ಕನಸಿನಲ್ಲೇ ಅವಳನ್ನು ಮೊದಲ ಸಲ ಕೇಳಿದ್ದೆ. 'ನೆನಪಿಲ್ಲ,' ಅಂದಿದ್ದಳು. 'ನಾವು ಮುಂಚೆನೇ ಒಬ್ಬರನ್ನೊಬ್ಬರು ನೋಡಿದ್ದೇವೆ ಅನಿಸತ್ತೆ,' ಅಂದೆ. ಅವಳು 'ನನಗೆ ಒಂದು ಸಲ ನಿನ್ನ ಕನಸು ಬಿದ್ದಿತ್ತು, ನಿನ್ನ ಇಂಥಾದ್ದೇ ರೂಮಿನಲ್ಲಿ ನೋಡಿದ್ದೆ,' ಅಂತ ಉದಾಸೀನವಾಗಿ, ಅಂದಳು. 'ಹೌದು, ಹೌದು. ಈಗ ನೆನಪಾಗತಾ ಇದೆ,' ಅಂದೆ. ಅವಳು, 'ಎಂಥಾ ವಿಚಿತ್ರ, ನನ್ನ ಕನಸಿನಲ್ಲಿ ನಾನು ನಿನ್ನನ್ನ, ನಿನ್ನ ಕನಸಿನಲ್ಲಿ ನೀನು ನನ್ನನ್ನ ನೋಡಿಕೊಂಡಿದ್ದೇವೆ. ಒಬ್ಬರ ಕನಸಿನಲ್ಲಿ ಇನ್ನೊಬ್ಬರನ್ನ ಮೀಟ್ ಆಗಿದ್ದೇವೆ,' ಅಂದಳು.

ಸಿಗರೇಟು ಎರಡು ದಮ್ ಎಳೆದಳು. ನಾನು ಇನ್ನೂ ದೀಪಕ್ಕೆ ಮುಖಮಾಡಿ ನಿಂತಿದ್ದೆ. ನಾನು ಇನ್ನೂ ದೀಪಕ್ಕೆ ಮುಖಮಾಡಿ ನಿಂತಿದ್ದೆ. ತಟ್ ಅಂತ ಅವಳನ್ನೇ ನೋಡತ್ತಾ ಇದ್ದೆ. ತಲೆಯಿಂದ ಕಾಲಿನವರೆಗೂ ನೋಡಿದೆ; ಅವಳಿನ್ನೂ ತಾಮ್ರವೇ; ಗಟ್ಟಿಯಾಗಿ, ತಣ್ಣಗೆ ಇರುವ ಲೋಹವಲ್ಲ, ಹಳದಿ ಬಣ್ಣದ, ಮಿದುವಾದ, ಬಾಗುವ, ಬಳುಕುವ ತಾಮ್ರವಾಗಿದ್ದಳು 'ನಿನ್ನ ಮುಟ್ಟಬೇಕು ಅನಿಸತ್ತೆ,' ಅಂತ ಇನ್ನೊಂದು ಸಲ ಅಂದೆ. 'ಎಲ್ಲಾನೂ ಹಾಳು ಮಾಡುತ್ತೀಯ,' ಅಂದಳು. 'ಪರವಾಗಿಲ್ಲ. ನಮ್ಮ ದಿಂಬು ತಿರುವಿ ಹಾಕಿಕೊಂಡರೆ ಸಾಕು, ಮತ್ತೆ ಭೇಟಿ ಆಗತೇವೆ,' ಅಂದೆ. ದೀಪದ ಮೇಲೆ ಕೈ ಚಾಚಿದೆ.ಅವಳು ಮಿಸುಕಲಿಲ್ಲ. ನಾನು ಅವಳನ್ನ ಮುಟ್ಟುವುದಕ್ಕೆ ಮೊದಲೇ, 'ಎಲ್ಲಾ ಹಾಳು ಮಾಡುತೀಯ,' ಅಂದಳು. 'ದೀಪದ ಹಿಂದಿನಿಂದ ಈ ಕಡೆ ನೀನು ಬಂದರೆ, ದಿಗಿಲುಬಿದ್ದು ಜಗತ್ತಿನ ಯಾವ ಭಾಗದಲ್ಲಿ ಯಾವ ಊರಲ್ಲಿ ನಮಗೆ ಎಚ್ಚರ ಆಗತ್ತೋ ಗೊತ್ತಿಲ್ಲ,' ಅಂದಳು. 'ಏನಾಗಲ್ಲ,